(3) ಅಧ್ಯಕ್ಷರ ಅಪ್ಪಣೆ ಮೇರೆಗೆ.

ಕೆಲವು ಮಂತ್ರಿಗಳ ಗೈರುಹಾಜರಿ ಬಗ್ಗೆ.

ಶ್ರೀ ಮಾಟಾಳ್ ನಾಗರಾಜ್:— ಮಾನ್ಯ ಅಧ್ಯಕ್ಷರೆ, ಅನಂತ್‌ನಾಗ್‌ರವರ ಬಗ್ಗೆ ಇವರು ಹೇಳಬೇಕಾಗಿದೆ, ಅವರು ಯಾವ ಇಲಾಖೆ, ಅದೇಕೆ ಬರುತ್ತಿಲ್ಲ, ನಮಗೆ ಗೊತ್ತಿಲ್ಲ. ಅವರು ಬರುತ್ತಾರೋ ಇಲ್ಲವೋ ಎಂಬ ಬಗ್ಗೆ ಸದನಕ್ಕಾದರೂ ಗೊತ್ತಾಗಬಾರದೇ? ಅವರು ಖಾತೆರಹಿತ ಮಂತ್ರಿಗಳೇ ಎಂಬ ಬಗ್ಗೆ ಹೇಳಬೇಕು. ಮಾನ್ಯ ವರದೇಗೌಡರು ರಾಜೀನಾಮೆ ಕೊಡುತ್ತೇವೆ ಎಂದು ಹೇಳುತ್ತಿದ್ದರು, ಅದು ರಾಜಭವನಕ್ಕೆ ಹೋಯಿತೋ ಇಲ್ಲವೋ, ಅವರು ರಾಜೀನಾಮೆ ಕೊಟ್ಟರೋ ಇಲ್ಲವೋ ಗೊತ್ತಾಗಿಲ್ಲ. ಅವರೂ ಸಹ ಇಲ್ಲಿಗೆ ಬರುತ್ತಿಲ್ಲ. ಮಾನ್ಯ ವೆಂಕಟೇಶ್‌ರವರು ಸಾರಾಸಗಟಾಗಿ ಕೊಡದೆ ಇರುವವರು ಯಾರು? ರಾಜೀನಾಮೆ ಕೊಡುವ ಪಟ್ಟಿಯಲ್ಲಿ ಇರುವವರು ಯಾರು? ಕೊಡದೆ ಇರುವವರು ಯಾರು? ರಾಜೀನಾಮೆ ಕೊಡುವ ಪಟ್ಟಿಯಲ್ಲಿ ಇರುವವರು ಯಾರು? ಎಂಬ ಬಗ್ಗೆ ಸರ್ಕಾರ ಹೇಳಬೇಕಲ್ಲವೆ? ಡಾ: ಮಹದೇವಪ್ಪನವರು ಸದನದ ಒಳಗಡೆಬಂದೇ ಇಲ್ಲ, ರೋಷನ್ ಬೇಗ್ ರವರೂ ಸಹ ಬಂದಿಲ್ಲ, ಕಾರಣವೇನು? ಒಳಗಡೆ ಒಂದು ರೀತಿ ಏನೋ ನಡೆಯುತ್ತಿದೆ, ಈ ಸದನದ ಅಧ್ಯಕ್ಷತೆಯನ್ನು ವಹಿಸತಕ್ಕ ತಾವು ವರದೇಗೌಡರ ಪರಿಸ್ಥಿತಿ, ಮಹದೇವಪ್ಪನವರ ಪರಿಸ್ಥಿತಿ, ಅನಂತ್‌ನಾಗ್‌ರವರ ಪರಿಸ್ಥಿತಿ, ವೆಂಕಟೇಶ್‌ರವರ ಸ್ಥಿತಿ ಏನು ಎಂಬ ಬಗ್ಗೆ ಸದನಕ್ಕೆ ಹೇಳಬೇಕು. ಈ ಸದನ ರಾಜ್ಯದ ಸಮಗ್ರತೆಯನ್ನು ತುಂಬತಕ್ಕ ಸದನ. ಇಂಥವರು ರಾಜೀನಾಮೆ ಕೊಟ್ಟಿದ್ದಾರೆ, ಇಂಥಿಂಥವರು ಹೊಸ ಸಚಿವರಾಗಿದ್ದಾರೆ, ಹೊಸ ಮಂತ್ರಿಗಳ ಪರಿಚಯವನ್ನು ಸರ್ಕಾರ ಇಲ್ಲಿ ಮಾಡಬೇಕಾಗುತ್ತದೆ. ಇದ್ಯಾವುದೂ ಸದನಕ್ಕೆ ಗೊತ್ತಾಗದೆ ಸದನವನ್ನು ಗೋಪ್ಯವಾಗಿಟ್ಟು ಸದನವನ್ನು ಕಗ್ಗತ್ತಿನಲ್ಲಿ ಇಟ್ಟು ಹೊರಗಡೆ ರಾಜಕೀಯ ಮಾಡುತ್ತಿದ್ದರೆ ಈ ಸದನಕ್ಕೆ ಗಾಂಭೀರ್ಯವಿರುವುದಿಲ್ಲ, ಈ ಸದನಕ್ಕೆ ಅತ್ಯಂತ ಗೌರವವಿದೆ, ತಮಗೆ ಲಿಖಿತ ಮೂಲಕ ಇರುವ ಮಾಹಿತಿಯನ್ನು ಸದನಕ್ಕೆ ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):— ಮಾನ್ಯ ಅಧ್ಯಕ್ಷರೆ, ಎಲ್ಲೆಲ್ಲಿ ಏನೇನು ವ್ಯತ್ಯಾಸವಾಗುತ್ತದೆ ಅದು ಮೊದಲು ಮಾಟಾಳ್ ನಾಗರಾಜ್‌ರವರಿಗೆ ಗೊತ್ತಗಲೇ ಬೇಕು. ಅದು ಆಗಿದೆ ಇದು ನಮ್ಮ ದುರ್ದೈವ. ಕಾನೂನಿನ ಪ್ರಕಾರ, ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಅದು ಇಲ್ಲದಿದ್ದರೂ ಸಹ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಮಾಡಿಕೆಯಂತೆ ಹೊಸ ಮಂತ್ರಿಮಂಡಲವನ್ನು ಮಾಡಿದಾಗ ಹೊಸ ಮಂತ್ರಿಗಳು ಇಂಥ ಖಾತೆ ಹೊಂದಿದ್ದಾರೆ, ಇಂಥಿಂಥವರು ಸಚಿವರಾಗಿದ್ದಾರೆಂದು ಇಲ್ಲಿ ಪರಿಚಯ ಮಾಡಲಾಗುತ್ತದೆ. ಆ ಕೆಲಸವನ್ನೂ ಸಹ ಮುಖ್ಯಮಂತ್ರಿಯವರು ಮಾಡಿಲ್ಲ. ಅದರ

ಮುಖಾಂತರ ನಮಗೆ ಗೊತ್ತಾಗುತ್ತದೆ, ಆದರೆ, ಆ ಕೆಲಸ ಕೂಡ ಆಗಿಲ್ಲ. ಅವರ ಖಾತೆಗಳು ಖಾಯಂ ಆಗಿಲ್ಲವೋ, ಅವರ ಮಂತ್ರಿ ಪದವಿಗೆ ಸೀಲ್ ಹಾಕಿಲ್ಲವೋ ಒಂದೂ ನಮಗೆ ಗೊತ್ತಾಗುತ್ತಿಲ್ಲ. ಏಕೆಂದರೆ, ಮೊದಲನೆಯ ದಿವಸವೇ ಅವರು ನಾವು ಇಂತಿಂಥವರನ್ನು ಹೊಸದಾಗಿ ಮಂತ್ರಿಮಂಡಲದಲ್ಲಿ ಸೇರಿಸಿದ್ದು ಅವರುಗಳಿಗೆ ಇಂತಿಂಥ ಖಾತೆಗಳನ್ನು ಹಂಚಲಾಗಿದೆ. ಎಂದು ಈ ಸದನಕ್ಕೆ ಪರಿಚಯಿಸುವಂಥ ಸಂಪ್ರದಾಯವಿದೆ. ತದನಂತರ, ಮಂತ್ರಿಮಂಡಲವನ್ನು ಪುನರ್ ರಚಿಸಿದಾಗ ಒಬ್ಬಿಬ್ಬರ ಸಚಿವರ ಖಾತೆಗಳನ್ನು ಬದಲಾಯಿಸಿದಾಗಲೂ ಕೂಡ ಸದನಕ್ಕೆ ತಿಳಿಸುವುದಿದೆ. ಆ ಕೆಲಸವನ್ನೂ ಕೂಡ ಮಾಡಿಲ್ಲ. ಹೀಗಾಗಿ, ಏನಾಗಿದೆಯೆಂದರೆ, ಮಂತ್ರಿಮಂಡಲದಲ್ಲಿರುವವರಿಗೆ ಇವೊತ್ತು ನಾವು ಇದ್ದೇವೆಯೋ ಇಲ್ಲವೋ ಎಂಬುದು ಅವರಿಗೇ ಖಾತ್ರಿ ಇಲ್ಲ. ಅವರಲ್ಲಿ ಗೊಂದಲವುಂಟಾಗಿ, ಒಳಜಗಳದಿಂದಾಗಿ ಆಡಳಿತ ಕುಸಿದು ಬಿದ್ದಿದೆಯೆಂದು ಪ್ರತ್ಯೇಕವಾಗಿ ಏನೂ ಹೇಳಬೇಕಾಗಿಲ್ಲ. ಅದು ತಮಗೂ ಗೊತ್ತಿದೆ. ಮೊನ್ನೆ ದಿಮಸ ಸರ್ಕಾರವನ್ನು ತಾವು ತರಾಟೆಗೆ ತೆಗೆದುಕೊಂಡಿರಿ. ತರಾಟೆಗೆ ತೆಗೆದುಕೊಂಡ ನಂತರ ನಮಗೇನಾದರೂ ಸ್ವಲ್ಪ ಪ್ರಯೋಜನವಾಗುತ್ತದೆಂದುಕೊಂಡರೆ ಏನೂ ಇಲ್ಲ. ನಾವು ಇಷ್ಟು ಹೇಳಿದರೂ, ಕೇಳಿದರೂ ಹೇಳುವವರು-ಕೇಳುವವರು ಯಾರೂ ಇಲ್ಲದಂತಾಗಿದೆ. ಅವರು ಯಾವುದೋ ಒಂದು ಲಾಸ್ಟ್ ಮೊಮೆಂಟ್‌ನಲ್ಲಿ ಬಂದು ಅವರ ಸ್ಟಾಕ್ ಇರುವ ಜೋಕ್ಸ್‌ಗಳಲ್ಲಿ ಯಾವುದಾದರೊಂದನ್ನು ಬಿಟ್ಟುಹೋಗುತ್ತಾರೆ, ಅಲ್ಲಿಗೆ ಸಮಾಪ್ತಿಯಾಗಿ ಸದನದ ಕೆಲಸ ಮುಗಿಯುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಅದು ಜೋಕುಗಳಲ್ಲ, ಅವರ ಮುತ್ಸದ್ದಿತನ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮಗೆ ಬೇಕಾದವರಿಗೆ ನೀವು ತುಪ್ಪ ಹಾಕಿ, ಆದರೆ, ನಮಗೆ ವಿಷ ಹಾಕಲು ಬರಬೇಡಿ. ಮನೆಗಳ ಏಜೂರ, ನಬಾರ್ಡ್‌ನ ವಿಚಾರ, ವರ್ಗಾವಣೆ ವಿಚಾರ, ನೇಮಕಾತಿ ವಿಚಾರ ಇನ್ನು ಮುಂತಾದ ಸಣ್ಣ-ಪುಟ್ಟ ಕೆಲಸಗಳನ್ನೇ ತೆಗೆದುಕೊಂಡರೂ ಡಿಸ್ಕ್ರಿಮಿನೇಷನ್ ಇದ್ದೇ ಇರುತ್ತದೆ. ನಮಗೆ ಅಧಿಕಾರವಿದೆ, ನಾವು ಮಾಡುತ್ತೇವೆ, ನೀವೇನು ಮಾಡುತ್ತೀರೋ ಮಾಡಿಕೊಳ್ಳಿರೆಂದರೆ ಅವರನ್ನು ಹಿಡಿದುಕೊಂಡು ಹೊಡೆಯುವುದಕ್ಕಾಗುತ್ತದೆಯೇ? ಇವರನ್ನು ಏನು ಮಾಡಬಹುದು? ಪ್ರಜಾಪ್ರಭುತ್ವದಲ್ಲಿ ನಾವು ನ್ಯಾಯವಾಗಿ ಕೇಳಬಹುದು ಮತ್ತು ಅವರೂ ಸಹ ನ್ಯಾಯವಾಗಿ ನಡೆದುಕೊಳ್ಳಬೇಕು. ತಮಗೆ ಡಿಸ್ಕ್ರಿಷನ್ ಇದ್ದರೂ ಕೂಡ ಯು ಮಸ್ಟ್ ಆಕ್ಟ್ ಜ್ಯುಡಿಷಿಯಸ್ಲಿ. ನಿಮ್ಮ ಅಧೀನದಲ್ಲಿದ್ದರೂ ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಣಯಗಳನ್ನು ತೆಗೆದುಕೊಳ್ಳಬೇಕೇ ಹೊರತು ನಿಮಗೆ ಇಚ್ಛೆಬಂದಂತೆ ನಿರ್ಣಯ ಕೈಗೊಳ್ಳಲು ಪ್ರಜಾಪ್ರಭುತ್ವದಲ್ಲಿ ಅಧಿಕಾರವಿಲ್ಲ. ನಿಮಗೆ ಡಿಸ್ಕ್ರೀಷನ್ ಇರಬಹುದು. ಆದರೆ, ಆ ಡಿಸ್ಕ್ರಿಷನ್ ಕೂಡ ನ್ಯಾಯಯುತವಾಗಿ ಮಾಡಬೇಕಾಗಿರುತ್ತದೆ. ಅದನ್ನೂ ಕೂಡ ಮಾಡಿಲ್ಲ. ತಾವು ಸದನ ಕರೆಯುತ್ತೀರಿ.

ಸದನ ಕರೆದಾಗ ನಮ್ಮ ಸಮಸ್ಯೆ ಬಗೆಹರಿಯುತ್ತದೆಂಬ ನಮಗೂ ಒಂದು ಭ್ರಮೆ! ಸದನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳು ಮಾತನಾಡಿ ತಮ್ಮ ಕುಂದು-ಕೊರತೆಗಳನ್ನು ಪ್ರಸ್ತಾಪಿಸಲಿ, ಅದಕ್ಕೆ ಏನಾದರೊಂದು ಪರಿಹಾರ ಕಂಡುಹಿಡಿಯೋಣವೆಂದರೆ ಯಾವುದೇ ಪರಿಹಾರ ಕಂಡುಹಿಡಿಯುವುದಿಲ್ಲ. ಕಬ್ಬಿನ ಸಮಸ್ಯೆ ಹೀಗಿದ್ದು ರೈತರ ಸ್ಥಿತಿ ಬಿಗಡಾಯಿಸಿರುವುದರಿಂದ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತೀರಾ ಎಂದರೆ ಅದರ ಬಗ್ಗೆ ಏನೂ ಪ್ರತಿಕ್ರಿಯೆ ಇಲ್ಲ. ಅನೇಕ ಖಾತೆಗಳನ್ನು ಹೊಂದಿದ್ದಾರೆ. ಅವರವರ ಖಾತೆನಾದರೂ ತಿಂಗಳಿಗೆ ಎರಡು ತಿಂಗಳಲ್ಲಿ ರೆವ್ಯೂ ಮಾಡುತ್ತಾರಾ ಅಂದರೆ ಅದೂ ಇಲ್ಲ. ಒಟ್ಟು 51 ಸಚಿವರಿರುವ ಮಂತ್ರಿ ಮಂಡಲದಲ್ಲಿ ಈಗಾಗಲೇ ಇಬ್ಬರು ಸಚಿವರು ಹೊರಗೆ ಹೋಗಿದ್ದು, ಇನ್ನೂ 8 ಸಚಿವರು ಹೋಗುತ್ತಾರೆಂದು ಹೇಳಿದ್ದಾರೆ. ಹೆಚ್.ಡಿ. ರೇವಣ್ಣನವರಿಗೆ ಇದರ ಬಗ್ಗೆ ಪಕ್ಕಾ ಗೊತ್ತಿರಬಹುದು. ಪಾಪ! ವೆಂಕಟೇಶ್‌ರವರು ಒಂದು ಸ್ಟೇಟ್‌ಮೆಂಟ್ ಕೊಟ್ಟ ಬಳಿಕ ಅವರ ಪತ್ತೆಯೇ ಇಲ್ಲ. ವರದೇಗೌಡರಂತೂ ತಮಗೆ ಪುನಃ ರೇಷ್ಮೆ ಖಾತೆಯನ್ನು ಮರಳಿ ಕೊಡುವವರೆಗೆ ಮಂತ್ರಿಮಂಡಲದೊಳಗೆ ಕಾಲಿಡುವುದಿಲ್ಲವೆಂದಿದ್ದಾರೆ. ನಾನು ಅವರ ಮಾತಿಗೆ ಒಪ್ಪುತ್ತೇನೆ. ನಿಜವಾಗಿಯೂ ಅವರು ಪ್ರಾಮಾಣಿಕರು, ದಕ್ಷರು. ಅವರು ಏನು ಹೇಳಿದ್ದರು, ಅದರಂತೆ ನಡೆದುಕೊಂಡು ಸಚಿವ ಸಂಪುಟದೊಳಗೆ ಬರಲೇ ಇಲ್ಲ. ತಮ್ಮ ಮಾತಿನ ಮೇಲೆಯೇ ನಿಂತಿದ್ದಾರೆ. ಹಾಗೆಯೇ ಅನೇಕ ಸಚಿವರಿದ್ದು ಅವರಿಗೆ ಒಳನೋವಿದೆ. ಉದಾಸಿಯವರಿಗೂ ಒಳನೋವಿದೆ. ಶಿವಪ್ಪನವರಿಗಂತೂ ಪಾಕೆಟ್‌ಗಿದ್ದು, ಚೇತರಿಸಿಕೊಳ್ಳುತ್ತಿಲ್ಲ, ಅವರಿಗೆ ಸಕ್ಕರೆ ಖಾತೆ ವಹಿಸಲಾಗಿದೆ. ಶಿವರಾಮೇಗೌಡರ ಪರಿಸ್ಥಿತಿ ಏನಾಗಿದೆಯೆಂದರೆ, ಅವರಿಗೆ ಹೌಸಿಂಗ್ ಬೋರ್ಡ್ ಸಿಕ್ಕನಂತರ ಕಣ್ಣು ತೆರೆದರು, ಬಿ.ಡಿ.ಎ. ಸಿಕ್ಕನಂತರ ಬಾಯಿ ತೆರೆದರು. ಈಗ ಅವರಿಗೆ ಖುಷಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್:— ಇದು ಇತ್ತೀಚಿನ ವರ್ಷದ, ಈ ಶತಮಾನದ ಅತ್ಯಂತ ಉತ್ತಮವಾದ ಮಾತು.

ಶ್ರೀ ಮಲ್ಲಿಕಾರ್ಜುನ ಖರ್ಗೆ:— ಶಿವರಾಮೇಗೌಡರು ಅಸೋಸಿಯೇಟ್ ಸದಸ್ಯರಾಗಿದ್ದರೂ ಕೂಡ ಹೌಸಿಂಗ್ ಬೋರ್ಡ್‌ನಲ್ಲಿ ಪವರ್ ಫುಲ್ ಹುದ್ದೆ ಕೊಟ್ಟಿದ್ದರಿಂದ ಅವರೀಗ ಕಣ್ಣು ತೆರೆದು ನೀವು ಎಲ್ಲೆಲ್ಲಿ ಕೆಲಸ ಮಾಡಿದ್ದೀರೆಂಬುದನ್ನು ನೋಡಿದ್ದಾರೆ. ಈಗ ಬಿ.ಡಿ.ಎ. ಕೊಟ್ಟಿರಿ, ಅವರು ಬಾಯಿ ತೆರೆದು ನಿಮ್ಮ ಪರವಾಗಿ ಮಾತನಾಡುತ್ತಿದ್ದಾರೆ. ಅದೇರೀತಿ ಬೇರೆ ಸಚಿವರಿಗೆ ಸಕ್ಕರೆ, ಬಂಧೀಖಾನೆ ಮುಂತಾದ ಸಣ್ಣಪುಟ್ಟ ಖಾತೆಗಳನ್ನು ಹುಡುಕಿ ಕೊಡುವುದರಲ್ಲಿ ಮುಖ್ಯಮಂತ್ರಿಗಳು ಸೋತು ಹೋಗಿದ್ದಾರೆ. ಅನಂತ್‌ನಾಗ್‌ರವರಿಗೆ ಕೊನೆಗೆ ಯಾವುದೇ ಪೋರ್ಟ್‌ಫೋಲಿಯೋ ಸಿಕ್ಕದಿದ್ದಾಗ ನೀನು ನನ್ನ ಜೊತೆಯಲ್ಲಿ ಬಾ ಎಂದು ಹೇಳಿ ಮುಖ್ಯಮಂತ್ರಿಗಳು ತಮ್ಮ ಜೊತೆಯಲ್ಲಿಟ್ಟುಕೊಂಡಿದ್ದಾರೆ. ಮತ್ತೆ

ಅವರೂ ಕೂಡ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ನಾನು ಯಾವಾಗಲೂ ಮುಖ್ಯಮಂತ್ರಿಗಳ ಜೊತೆಯಲ್ಲಿರುವುದರಿಂದ ಅದಕ್ಕಾಗಿ ನನಗೆ ಅಟ್ಯಾಚ್ಡ್ ಟು ಚೀಫ್ ಮಿನಿಸ್ಟರ್ ಪೋರ್ಟ್‌ಫೋಲಿಯೋ ಕೊಟ್ಟಿದ್ದಾರೆ. ನನಗೆ ಬೆಂಗಳೂರು ನಗರಾಭಿವೃದ್ಧಿ ಪ್ರಾದಿಕಾರದ ಖಾತೆ ಕೊಟ್ಟಿದ್ದರಿಂದ ಬೆಂಗಳೂರಿನಲ್ಲೇ ಸುತ್ತಾಡಬೇಕಾಗುತ್ತಿತ್ತು. ಈಗ ಅಟ್ಯಾಚ್ಡ್ ಟು ಚೀಫ್ ಮಿನಿಸ್ಟರ್ ಪೋರ್ಟ್ ಫೋಲಿಯೋ ಕೊಟ್ಟಿರುವುದರಿಂದ ಮುಖ್ಯಮಂತ್ರಿಗಳೊಂದಿಗೆ ಇಡೀ ದೇಶಾದ್ಯಂತ, ಪ್ರಪಂಚಾದ್ಯಂತ ಎಲ್ಲಗೆ ಬೇಕಾದರೂ ಹೋಗಬಹುದೆಂದು ಅವರೇ ಒಪ್ಪಿಕೊಂಡಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ತಾವು ಸದನವನ್ನು ಕರೆದಿದ್ದು, ನಾವೆಲ್ಲರೂ ಕೂಡ ಅದಕ್ಕೆ ಮನ್ನಣೆ ಕೊಟ್ಟು ಬಂದಿದ್ದೇವೆ. ಆದರೆ, ಇಲ್ಲಿಗೆ ಬಂದು ಪರಿಸ್ಥಿತಿ ನೋಡಿದಾಗ ನಮಗೆ ಏನಾಗಿದೆಯೆಂದರೆ, ನಮ್ಮ ಸಮಸ್ಯೆಗಳಿಗೆ ಯಾರೂ ಸ್ಪಂದಿಸುವುದಿಲ್ಲವೆಂದು ಗೊತ್ತಾಗಿದೆ. ಅದಕ್ಕೆ ನಾವು ಏನು ಮಾಡುತ್ತಿದ್ದೇವೆಂದರೆ, ಪದೇ ಪದೇ ನಿಮ್ಮ ಕೊಠಡಿಯೊಳಗೆ ಬರಬೇಕು, ನಮ್ಮ ಗೋಳನ್ನು ಹೇಳಬೇಕು. ನನ್ನ ಕೊಠಡಿಗೆ ಬನ್ನಿ, ಸಾಧ್ಯವಾದಷ್ಟು ನಾನು ಪರಿಶೀಲನೆ ಮಾಡುತ್ತೇನೆಂದು ನೀವು ಹೇಳುತ್ತೀರಿ. ಈಗಾಗಲೇ ತಮ್ಮ ಕೊಠಡಿಗೆ ಮೂವರನ್ನು ಕರೆಸಿದ್ದೀರಿ ಮತ್ತು ನೀವು ಏನೇನು ಮಾಡಿದಿರೋ ನನಗೆ ಗೊತ್ತಿಲ್ಲ.

ಶ್ರೀ ಸಿ. ಚೆನ್ನಿಗಪ್ಪ :— ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕರು ಹೇಳಿದ ಮಾತನ್ನು ಒಪ್ಪಿಕೊಳ್ಳುತ್ತೇವೆ. ನಮ್ಮ ಸರ್ಕಾರದಲ್ಲಿ ವರದೇಗೌಡರಾಗಲಿ, ಮತ್ತೊಬ್ಬ ಸಚಿವರಾಗಲಿ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧವಾಗಿ ನಾವ್ಯಾರೂ ಕೆಲಸ ಮಾಡಿಲ್ಲ. ಅವರು ನಮಗೆ ಯಾವ ಖಾತೆ ಕೊಡುತ್ತಾರೋ, ಆ ಖಾತೆಯಲ್ಲಿ ಕೆಲಸ ಮಾಡಲು ನಾವು ಸಿದ್ಧರಿದ್ದೇವೆ. ಆದರೆ, ನಿಮ್ಮಲ್ಲಿ ಹೊಂದಾಣಿಕೆಗೆ ಅವಕಾಶವಿಲ್ಲವೆಂದು ಹೇಳುತ್ತಿದ್ದಾರೆ. ನಮ್ಮಲ್ಲಿ ಹೊಂದಾಣಿಕೆ ಇದೆಯೆಂದು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮ್ಮ ಕೆಲಸ ಆಗಿಲ್ಲವೆಂದು ಗೋಳಾಡುತ್ತಿದ್ದಿರಿ. ಆದರೆ, ಇವೊತ್ತು ನೀವು ಹಾಗೆ ಹೇಳಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ :— ಚೆನ್ನಿಗಪ್ಪನವರು ಮಂತ್ರಿಯಾಗುತ್ತಾರೆಂದು ನಮಗೆ ಆಸೆಯಿತ್ತು.

ಶ್ರೀ ಸಿ. ಚೆನ್ನಿಗಪ್ಪ :— ಮಾನ್ಯ ಮುಖ್ಯಮಂತ್ರಿಗಳು ಹೆಚ್ಚು ಹೊತ್ತು ಕೆಲಸ ಮಾಡುತ್ತಾರೆ. ಆದುದರಿಂದ, ತಮ್ಮ ಆಸೆ, ಆಸೆಗಳೆಲ್ಲವೂ ನನಸಾಗುತ್ತವೆ.

ಶ್ರೀ ವಾಟಾಳ್ ನಾಗರಾಜ್ :— ಅಶ್ವತ್ಥನಾರಾಯಣರೆಡ್ಡಿಯವರು ಗೃಹಮಂತ್ರಿಯಾಗುವ ಬದಲು ಚೆನ್ನಿಗಪ್ಪನವರು ಗೃಹಮಂತ್ರಿಯಾಗುತ್ತಾರೆಂದು ನಾವು ತಿಳಿದಿದ್ದವು. ಅವರಿಗೆ ಅದೂ ಸಿಗಲಿಲ್ಲ.

ಶ್ರೀ ಸಿ. ಬೆನ್ನಿಗಪ್ಪ :— ನೀವು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಆದರೆ, ಯಾವುದೇ ಕಾಲಕ್ಕೂ ಜನತೆಗೆ ಅನ್ಯಾಯ ಮಾಡುವ ಸರ್ಕಾರ ಇದಲ್ಲ. ಮತ್ತು ಇನ್ನೊಂದು ವಿಚಾರ ಪ್ರಾಮಾಣಿಕವಾಗಿ ಈ ಸದನದಲ್ಲಿ ಹೇಳುತ್ತೇನೆ. ನಾವು ಯಾವತ್ತೂ ಕೂಡ ಮುಖ್ಯಮಂತ್ರಿಗಳ ವಿರುದ್ಧವಾಗಿ ಕೆಲಸ ಮಾಡಿಲ್ಲ. ನಾವು ನ್ಯಾಯವಾಗಿ ಕೆಲಸವಾಗಬೇಕೆಂದು ಹೇಳಿದರೆ, ನೀವೇ ಮುಂದೆ ಅಧಿಕಾರಕ್ಕೆ ಬರಬೇಕೆಂದು ನಮಗೆ ಹೇಳುತ್ತೀರಿ, ಸಂತೋಷ ಆದರೆ, ವಿಷಯ ಅದಲ್ಲ. ನಾನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಸರ್ಕಾರದ ಬಗ್ಗೆ ಟೀಕೆ-ಟಿಪ್ಪಣಿ ಮಾಡುವ ಮಟ್ಟದಲ್ಲಿ ನಾವ್ಯಾರೂ ಕೂಡ ಕೆಲಸ ಮಾಡಿಲ್ಲ.

ಅಧ್ಯಕ್ಷರು :— ಇಟ್ ಈಸ್ ಗುಡ್ ಡೆವಲಪ್‌ಮೆಂಟ್ ಇನ್ ದಿ ಮಾರ್ನಿಂಗ್.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇರಬಹುದು, ಆದರೆ, ಲೇಟೆಸ್ಟ್ ಡೆವಲಪ್‌ಮೆಂಟ್ ಗೊತ್ತಿಲ್ಲ. ಅವರು ದೇವೇಗೌಡರ ನಾಯಕತ್ವವನ್ನು ಒಪ್ಪಿಕೊಳ್ಳುತ್ತಾರೋ? ಪಟೇಲರ ನಾಯಕತ್ವವನ್ನು ಒಪ್ಪಿಕೊಳ್ಳುತ್ತಾರೋ ಎಂಬುದನ್ನು ನನಗೆ ಅವರು ಆತ್ಮಸಾಕ್ಷಿಯಾಗಿ ಹೇಳಲಿ.

ಶ್ರೀ ಸಿ. ಬೆನ್ನಿಗಪ್ಪ :— ನಾವು ಪಟೇಲರು ಮತ್ತು ದೇವೇಗೌಡರು ಇಬ್ಬರ ಕಡೆಗೂ ಇದ್ದೇವೆ. ನಮ್ಮಲ್ಲಿ ಪಾರ್ಟಿ ಎಂದು ಇಲ್ಲ.

ಶ್ರೀ ಸಿ. ಭೈರೇಗೌಡ :— ನಿಮ್ಮಲ್ಲಿ ಏನು ನಡೆಯುತ್ತಿದೆಯೆಂಬ ಬಗ್ಗೆ ಮೊದಲು ಸ್ವಲ್ಪ ಯೋಚನೆ ಮಾಡಿ. ಧರ್ಮಸಿಂಗ್‌ರವರು ಹೆಸರಿಗೆ ತಕ್ಕಂತೆ ಧರ್ಮರಾಜನಂತಿದ್ದು ಪಕ್ಷವನ್ನು ಮುನ್ನಡೆಸುತ್ತಿದ್ದರು. ಆದರೆ, ಇವ್ಹೊತ್ತು ಅವರು ಮೂಲೆಗೆ ಹೋದರು.

ಅಧ್ಯಕ್ಷರು :— ಕೃಷ್ಣ ಬಂದರೆ ಧರ್ಮರಾಜ ಯೀಲ್ಡ್ ಆಗಬೇಕೋ? ಬೇಡವೋ? ನೀವೇ ಹೇಳಿ.

ಶ್ರೀ ಸಿ. ಭೈರೇಗೌಡ :— ಆಗ ನಡೆದಂಥ ಅನ್ಯಾಯ ಈಗಲೂ ನಡೆಯುತ್ತಿದೆ.

ಶ್ರೀ ಎಂ.ಪಿ. ಪ್ರಕಾಶ್ :— ಆ ತರಹದ ಸೋದರ ಮಾವನಿದ್ದರೆ ಹೇಗಾಗುತ್ತದೆ? ಆ ತರಹ ಇರಬಾರದು. ಧರ್ಮರಾಯನಿಗೆ ಸೋದರಮಾವನಾಗಿದ್ದಂಥ ಕೃಷ್ಣನಂಥವರಿದ್ದರೆ ಬಹಳ ಕಷ್ಟ.

ಅಧ್ಯಕ್ಷರು :— ಸೋದರ ಮಾವ ಕೃಷ್ಣನಂತಿದ್ದರೆ ಪರವಾಗಿಲ್ಲ, ಕಂಸನಂತಿರಬಾರದು.

ಶ್ರೀ ಎಂ.ಪಿ. ಪ್ರಕಾಶ್ :— ಬಂದಿರುವುದು ಕೃಷ್ಣನಲ್ಲ, ಕಂಸ!

ಅಧ್ಯಕ್ಷರು :— ನಮಗೆ ತೊಂದರೆಯೇನೆಂದರೆ, ಕೃಷ್ಣ ಎಲ್ಲಿದ್ದಾನೆ? ಕಂಸ ಎಲ್ಲಿದ್ದಾನೆ ಎಂಬ ಗುರ್ತೇ ಸಿಗುತ್ತಿಲ್ಲ.

10.10 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ :— ಇಲ್ಲಿ ಇಬ್ಬರು ಹಿರಿಯ ಸಚಿವರು ಕುಳಿತಿದ್ದಾರೆ. ಮುಖ್ಯಮಂತ್ರಿಗಳು ಇಲ್ಲ. ಆದ್ದರಿಂದ ನಾನು ಕೇಳಿರುವ ವಿಚಾರದ ಬಗ್ಗೆ ಇವರಾದರೂ ಉತ್ತರ ಹೇಳಬೇಕು. ಇಲ್ಲದಿದ್ದರೆ ತಮಗೆ ಯಾರಿಂದಲಾದರೂ ಪತ್ರ ಬಂದಿದ್ದರೆ ತಿಳಿಸಬೇಕು.

ಅಧ್ಯಕ್ಷರು :— ನನಗೆ ಅನಂತ್‌ನಾಗ್‌ರವರು ಒಂದು ಪತ್ರವನ್ನು ಬರೆದು ಐದಾರು ದಿವಸ ಸದನಕ್ಕೆ ಬರಲು ಆಗುವುದಿಲ್ಲವೆಂದು ತಿಳಿಸಿ ಹೋಗಿದ್ದಾರೆ. ಅವರು ಹೋಗಲು ಹೋಗದಿರಲು ನಾನೇನೂ ಹೇಳಿಲ್ಲ, ಅವರೂ ನನ್ನ ಅನುಮತಿಗಾಗಿ ಕಾದಿಲ್ಲ. ಮಾನ್ಯ ವರದೇಗೌಡರು, ರೋಷನ್ ಬೇಗ್‌ರವರು ನನಗೇನೂ ಪತ್ರವನ್ನು ಬರೆದಿಲ್ಲ. ಮಾನ್ಯ ಮಹದೇವಪ್ಪನವರಿಗೆ ಅವರ ಭಾವ ತೀರಿಕೊಂಡಿದ್ದಾರೆ ಆದ್ದರಿಂದ ನಾನು ಒಂದು ವಾರದ ವರೆಗೆ ಸದನಕ್ಕೆ ಬರಲು ಆಗುವುದಿಲ್ಲವೆಂದು ತಿಳಿಸಿರುತ್ತಾರೆ. ಉಳಿದವರ ಬಗ್ಗೆ ಮತ್ತು ಅವರುಗಳ ಖಾತೆಯ ಬಗ್ಗೆ ನನಗೆ ಸಂಬಂಧಪಡುವುದಿಲ್ಲ. ಅದು ನನ್ನ ವ್ಯಾಪ್ತಿಗೆ ಸಹ ಬರುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾವುದೇ ಗೊಂದಲದ ವಿಚಾರವಿಲ್ಲ. ಮಾನ್ಯ ಜೆ.ಹೆಚ್ ಪಟೇಲ್‌ರವರ ನೇತೃತ್ವದ ಸರ್ಕಾರ ತನ್ನ ಐದು ವರ್ಷಗಳ ಅವಧಿಯನ್ನು ಪೂರ್ಣಗೊಳಿಸುತ್ತದೆ. ಮುಂದೆ ಕನ್ನಡಿಗರ ಆಶೀರ್ವಾದದಿಂದ ಮತ್ತೆ ಅಧಿಕಾರಕ್ಕೂ ಬರುತ್ತದೆ.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ಇಂಥಿಂಥ ಸಚಿವರು ರಾಜೀನಾಮೆ ಕೊಟ್ಟಿದ್ದಾರೆಂದು ಬರುತ್ತದೆ, ತಾವು ನನಗೆ ಇದ್ಯಾವುದೂ ಗೊತ್ತಿಲ್ಲವೆಂದು ಹೇಳುತ್ತೀರಿ. ಜನರು ಬಹಳ ಕಾತುರತೆಯಿಂದ ಇದರ ಬಗ್ಗೆ ನಿರೀಕ್ಷೆ ಮಾಡುತ್ತಿದ್ದಾರೆ.

ಅಧ್ಯಕ್ಷರು :— ಮಂತ್ರಿಗಳು ರಾಜೀನಾಮೆ ಕೊಡುವುದು ಮುಖ್ಯಮಂತ್ರಿಗಳಿಗೆ ಸದಸ್ಯರುಗಳು ರಾಜೀನಾಮೆ ಕೊಡುವುದು ಅಧ್ಯಕ್ಷನಾದ ನನಗೆ. ತಾವು ಯಾರಾದರೂ ರಾಜೀನಾಮೆ ಕೊಟ್ಟರೆ ಪ್ರಕಟಣೆ ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ :— ನಮಗೆ ಇದರ ಬಗ್ಗೆ ಏನೂ ತಿಳುವಳಿಕೆ ಇಲ್ಲ. ನಾವು ಯಾರ್ಯಾರ ಹತ್ತಿರ ಏನೇನು ಕೆಲಸಕ್ಕೆ ಹೋಗಬೇಕು ಎಂಬುದು ಅರ್ಥವಾಗುತ್ತಿಲ್ಲ. ಸಚಿವರುಗಳ ಕೊಠಡಿ ಎಲ್ಲಿ ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :— ಸದಸ್ಯರ ರಾಜೀನಾಮೆ ಪತ್ರ ಬಂದರೂ ಸಹ ಅದು ಸರಿಯಾದ ಫಾರಂನಲ್ಲಿ ಇಲ್ಲವೆಂದು ತಾವು ತಿರಸ್ಕಾರ ಮಾಡುತ್ತೀರಿ.

ಅಧ್ಯಕ್ಷರು :— ತಾವು ಹೇಳುವುದು ಸರಿಯಾಗಿದೆ. ಈ ಸದನದಿಂದ ಅನೇಕ ಜನ ಸದಸ್ಯರು ನನಗೆ ರಾಜೀನಾಮೆ ಕೊಟ್ಟಿದ್ದಾರೆ. ಅವರು ರಾಜೀನಾಮೆಯನ್ನು ನಿಗದಿಯಾದ ನಮೂನೆಯಲ್ಲೇ ಕೊಡಬೇಕು. ಆ ರೀತಿ ರಾಜೀನಾಮೆ ಕೊಟ್ಟಮೇಲೆ ನಾನು ಅವರನ್ನು ಖುದ್ದಾಗಿ ಕರೆಸಿ ಇದನ್ನು ನೀವೇ ಕೊಟ್ಟಿದ್ದೀರಾ ಯಾವುದಾದರೂ ಆವೇಶದಲ್ಲಿ ಕೊಟ್ಟಿದ್ದೀರಾ? ಭಯ, ಆತಂಕಕ್ಕೆ ಒಳಗಾದ ಮನಸ್ಸಿನಿಂದ ಕೊಟ್ಟಿದ್ದೀರಾ? ಖುದ್ದು ರಾಜಿಯಿಂದ ಕೊಟ್ಟಿದ್ದೀರಾ ಎಂದು ಕೇಳಿ ಮನವರಿಕೆ ಮಾಡಿಕೊಂಡು ಸನ್ನ ಒಪ್ಪಿಗೆ ಕೊಡಬೇಕಾಗುತ್ತದೆ. ಡಾ ಜೀವರಾಜಆಳ್ವರವರು ರಾಜೀನಾಮೆ ಕೊಟ್ಟಿದ್ದರು, ಅವರನ್ನು ನಾನು ಮನೆಗೆ ಕರೆಸಿಕೊಂಡು ಅವರಿಗೆ ಅವರ ರಾಜೀನಾಮೆಯನ್ನು ಒಪ್ಪಿಕೊಳ್ಳಬೇಕಾಯಿತು. ರಾಜೀನಾಮೆ ಒಪ್ಪಬೇಕಾದರೆ ನಿಯಮವೇ ಆ ರೀತಿ ಇದೆ. ಇವರಲ್ಲಿ ಕೆಲವಾರು ಸದಸ್ಯರು ರಾಜೀನಾಮೆ ಕೊಟ್ಟಿದ್ದರು, ಆದರೆ ಅದು ನಿಯಮದ ಅನುಸಾರ ಇರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ತಾವು ಸದಸ್ಯರು ರಾಜೀನಾಮೆ ಕೊಟ್ಟರೆ ಹಲವಾರು ಹಂತಗಳಲ್ಲಿ ಪರಿಶೀಲನೆ ಮಾಡುತ್ತೀರಿ. ಆದರೆ ಮುಖ್ಯಮಂತ್ರಿಗಳಿಗೆ ಮಾನ್ಯ ಜಯಚಾಮರಾಜೇಂದ್ರರವರು ರಾಜೀನಾಮೆ ಕೊಟ್ಟಿದ್ದ ಬಗ್ಗೆ ಪತ್ರಿಕೆಗಳಲ್ಲಿ ಬಂತು. ತಾವು ನನಗೆ ಕ್ಯಾಬಿನೆಟ್ ಸಚಿವರನ್ನಾಗಿ ಮಾಡಲಿಲ್ಲ, ನನಗೆ ನೋವಾಗಿದೆಯೆಂದು, ನನಗೆ ನ್ಯಾಯ ಒದಗಿಸಿ ಕೊಡಬೇಕು ಇಲ್ಲದಿದ್ದರೆ ನಾನು ರಾಜೀನಾಮೆ ಕೊಡಬೇಕಾಗುತ್ತದೆ ಎಂದು ಕೇಳಿದರೆ, ಮುಖ್ಯಮಂತ್ರಿಯವರು ಹಾಗಿದ್ದರೆ ತಾವು ರಾಜೀನಾಮೆ ಕೊಟ್ಟುಹೋಗಿ ಎಂದಿದ್ದಾರೆ. ತಾವು ಇಷ್ಟಾದರೂ ಕರೆದು ಕೇಳುತ್ತೀರಿ, ಆದರೆ ಮಾನ್ಯ ಪಟೇಲ್‌ರವರು ರಾಜೀನಾಮೆ ಇಟ್ಟುಹೋಗು ಇಲ್ಲವೆ ಬಿಟ್ಟುಹೋಗು ಎಂಬ ಒಂದೇ ಒಂದು ನಿಲುವಾಗಿದೆ. ಇದು ಪತ್ರಿಕೆಯಲ್ಲೂ ಬಂದಿದೆ, ತಾವು ಇದನ್ನು ಅಲ್ಲಗಳೆದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೆ, ಅನೇಕ ಸಂದರ್ಭಗಳಲ್ಲಿ ಪತ್ರಿಕೆಗಳಲ್ಲಿ ಸರಿಯಾದ ಮಾಹಿತಿ ಇರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಪ್ರಕಾಶ್‌ರವರು ನನಗೆ ವಾರ್ತಾ ಇಲಾಖೆ ಮಹಿಷಿದ್ದಾರೆ, ಈ ಖಾತೆ ಮಾನ್ಯ ನಾಣಯ್ಯನವರ ಹತ್ತಿರವೇ ಇರಬಹುದಾಗಿತ್ತು, ಇದನ್ನು ನನಗೇಕೆ ಮಹಿಷಿದರೋ ಎಂದು ತಾವೇ ಹೇಳಿಕೊಂಡಿರುವುದು ಪತ್ರಿಕೆಗಳಲ್ಲಿ ಬಂದಿದೆ, ಇದು ನಿಜವೋ? ಇಲ್ಲವೋ?

ಶ್ರೀ ಎಂ.ಪಿ. ಪ್ರಕಾಶ್ :— ಇದು ನಿಜ. ಇದರಲ್ಲಿ ಸುಳ್ಳೇನಿಲ್ಲ.